2017 ಕ.ತೀ.ವ. 214

## ಸನ್ಮಾನ್ಯ ನ್ಯಾಯಮೂರ್ತಿ ಡಾ॥ ವಿನೀತ್ ಕೊಠಾರಿ

## ಶ್ರೀಮತಿ ಎನ್. ತುಳಸಿ ರವಿ –ವಿರುದ್ಧ– ಕರ್ನಾಟಕ ಸರ್ಕಾರ, ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಇತರರು *

**ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.**

**ರಿಟ್ ಅರ್ಜಿದಾರರು ಚಿಂತಾಮಣಿ ಪಾಲಿಕೆಯ ಉಪಾಧ್ಯಕ್ಷರಾಗಿದ್ದು, ಸಾರ್ವಜನಿಕ ಕುಂದುಕೊರತೆಗಳನ್ನು ಚರ್ಚಿಸುವ ಸಲುವಾಗಿ ಸಭೆಯನ್ನು ಕರೆಯುವಂತೆ ಚಿಂತಾಮಣಿ ಪಾಲಿಕೆಯ ಅಧ್ಯಕ್ಷರಿಗೆ ನಿರ್ದೇಶನವನ್ನು ನೀಡುವಂತೆ ಕೋರಿ ಸದರಿ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ.**

**ಸಾರ್ವಜನಿಕರಿಂದ ಚುನಾಯಿತರಾದ ಸಂಸ್ಥೆಗಳ ಅಂತರಿಕ ವಿಷಯಗಳಲ್ಲಿ ಉಚ್ಚ ನ್ಯಾಯಾಲಯಗಳು ಭಾರತ ಸಂವಿಧಾನ ಅನುಚ್ಛೇದ 226ರಡಿಯಲ್ಲಿ ಹಸ್ತಕ್ಷೇಪ ಮಾಡಿದರೆ ಅದು ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯನ್ನು ದುರುಪಯೋಗ ಪಡಿಸಿಕೊಂಡಂತಾಗುತ್ತದೆಂದು ಅಭಿಪ್ರಾಯಪಟ್ಟು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.**

ಅರ್ಜಿದಾರರ ಪರ : ಶ್ರೀ ನಾರಾಯಣ ಸ್ವಾಮಿ ವಿ.ಕೆ. ವಕೀಲರು
ಪ್ರತ್ಯರ್ಜಿದಾರ ಆರ್1 ಪರ : ಶ್ರೀ ವಿ. ಶ್ರೀನಿಧಿ, ವಕೀಲರು.

---

*ರಿಟ್ ಅರ್ಜಿ ಸಂಖ್ಯೆ: 23091/2016 (ಎಲ್‌ಬಿ–ಆರ್‌ಇಎಸ್), ದಿನಾಂಕ: 13ನೇ ಜುಲೈ, 2016.

## ಆಜ್ಞೆ

**ನ್ಯಾಯಮೂರ್ತಿ ಡಾ|| ವಿನೀತ್ ಕೊಠಾರಿ :**

1. ಶ್ರೀಮತಿ ಎನ್. ತುಳಸಿ ರವಿ, ಉಪಾಧ್ಯಕ್ಷರು, ನಗರ ಸಭೆ, ಚಿಂತಾಮಣಿ, ಚಿಕ್ಕಬಳ್ಳಾಪುರ ಜಿಲ್ಲೆ, ಇವರು ಅರ್ಜಿದಾರರಾಗಿದ್ದು, ಇವರ ಪ್ರಕಾರ ಚಿಕ್ಕಬಳ್ಳಾಪುರ ಜಿಲ್ಲೆಯ, ಚಿಂತಾಮಣಿಯ ಸದರಿ ನಗರ ಪಾಲಿಕೆಯ ಅಧ್ಯಕ್ಷರು ಅಂದರೆ ಇಲ್ಲಿನ ಪ್ರತ್ಯರ್ಜಿದಾರ ಸಂ.2, ಇವರು ಸಾರ್ವಜನಿಕ ಕುಂದುಕೊರತೆಗಳನ್ನು ನಿವಾರಿಸಲು ನಗರ ಪಾಲಿಕೆಯಲ್ಲಿ ಯಾವುದೇ ಸಭೆಯನ್ನು ಕರೆಯಲು ವಿಫಲರಾಗಿರುತ್ತಾರೆಂದು ಆರೋಪ ಮಾಡಿ ಇವರ ವಿರುದ್ಧ ಮ್ಯಾಂಡಮಸ್ ರಿಟ್ ಅರ್ಜಿಯನ್ನು ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ತಾವು ಸಾರ್ವಜನಿಕರಿಂದ ಸಾಕಷ್ಟು ಅಹವಾಲುಗಳನ್ನು ಸ್ವೀಕರಿಸಿ, ಪ್ರತ್ಯರ್ಜಿದಾರ ಸಂ.2 ರವರಿಗೆ, ಅವುಗಳನ್ನು ನೀಡಿ, ನಗರ ಪಾಲಿಕೆಯ ಸಭೆಯನ್ನು ಕರೆದು ಅಂಥ ಸಭೆಗಳಲ್ಲಿ ಸಾರ್ವಜನಿಕ ಕುಂದುಕೊರತೆಗಳನ್ನು ಚರ್ಚಿಸಿ ಸೂಕ್ತ ಠರಾವುಗಳನ್ನು ಹೊರಡಿಸಬಹುದಾಗಿತ್ತು. ಆದರೆ ಅಂಥ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲವೆಂದು ಅರ್ಜಿಯಲ್ಲಿ ತಿಳಿಸಿರುತ್ತಾರೆ.

2. ಅರ್ಜಿದಾರರ ಪರ ಮಾನ್ಯ ವಕೀಲರು ಎರಡು ಅರ್ಜಿಗಳು ಅಂದರೆ, 13.11.2015ನೇ ದಿನಾಂಕದ ಅನುಬಂಧ–ಎ ಮತ್ತು 08.03.2016ನೇ ದಿನಾಂಕದ ಅನುಬಂಧ–ಸಿ ಗಳು ಅರ್ಜಿದಾರ – ಉಪಾಧ್ಯಕ್ಷರು ಪ್ರಸ್ತಾಪಿಸಿದ ಸಾರ್ವಜನಿಕ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನಗರ ಪಾಲಿಕೆಯ ಮಾನ್ಯ ಇಂಜಿನಿಯರ್‌ಗಳು ಹಾಗೂ ಕಂದಾಯ ಅಧಿಕಾರಿಗಳಿಂದ ವರದಿಗಳನ್ನು ತರಿಸಿಕೊಂಡು ಅವುಗಳ ಮೇಲೆ ಆಯುಕ್ತರು ಹೊರಡಿಸಿದ 18.01.2016ನೇ ದಿನಾಂಕದ ಅನುಬಂಧ – ಬಿ ಯಲ್ಲಿನ ಆದೇಶದ ಪ್ರತಿಯನ್ನು ಸಲ್ಲಿಸಿರುತ್ತಾರೆ.

3. ಈ ದಸ್ತಾವೇಜುಗಳು ಸ್ಥಳೀಯ ಭಾಷೆಯಲ್ಲಿದ್ದು, ಈ ನ್ಯಾಯಾಲಯದ ಅನುಕೂಲಕ್ಕಾಗಿ ಮತ್ತು ಇದನ್ನು ಅರ್ಥೈಸಿಕೊಳ್ಳುವ ಸಲುವಾಗಿ, ಈ ವಿಷಯದಲ್ಲಿ ಮಧ್ಯೆಪ್ರವೇಶಿಸಿದಂಥ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರಾದ ಶ್ರೀಯುತ ವಿ. ಶ್ರೀನಿಧಿಯವರ ನೆರವಿನೊಂದಿಗೆ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಇವುಗಳನ್ನು ವಿವರಿಸಿರುತ್ತಾರೆ.

4. ರಿಟ್ ಅರ್ಜಿಯಲ್ಲಿ ಮಾಡಿರುವ ಪ್ರಾರ್ಥನೆಯು, ಮೇಲ್ನೋಟಕ್ಕೆ, ಅಂಥ ಸಭೆಯನ್ನು ಕರೆಯಲು ಪ್ರತ್ಯರ್ಜಿದಾರ ಸಂ.2 ರವರಿಗೆ ಮ್ಯಾಂಡಮಸ್ ರಿಟ್‌ನ ನಿರ್ದೇಶನವನ್ನು ಕೋರಿರುವುದು ನಿರ್ಬಾಧಕವೆಂದು ಕಂಡು ಬಂದಿದ್ದಾಗ್ಯೂ, ನಗರ ಪಾಲಿಕೆಯಂಥ ಸಾರ್ವಜನಿಕವಾಗಿ ಚುನಾಯಿತವಾದ ನಿಕಾಯದ ಆಡಳಿತದ ಅವಶ್ಯಕ ಅಂತರಿಕ ವಿಷಯಗಳಾಗಿರುವಂಥ ಈ ವ್ಯವಹಾರಗಳಿಗೆ ಸಂಬಂಧಿಸಿದಂತೆ ಭಾರತ ಸಂವಿಧಾನದ 226ನೇ ಅನುಚ್ಛೇದದಡಿಯಲ್ಲಿನ ರಿಟ್ ಅರ್ಜಿಗಳು ಭಾರತ ಸಂವಿಧಾನದ 226ನೇ ಅನುಚ್ಛೇದದಡಿಯಲ್ಲಿನ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯಲ್ಲಿನ ಕಾರ್ಯವಿಧಾನವನ್ನು ಖಂಡಿತವಾಗಿ ದುರುಪಯೋಗ ಪಡಿಸಿಕೊಂಡಂತಾಗುತ್ತದೆಂಬುದು ಈ ನ್ಯಾಯಾಲಯದ ಸ್ಪಷ್ಟ ಅಭಿಪ್ರಾಯವಾಗಿರುತ್ತದೆ.

5. ನಗರ ಪಾಲಿಕೆಯಂಥ ಚುನಾಯಿತ ನಿಕಾಯದ ಉನ್ನತ ಸ್ಥಾನಕ್ಕೆ ಆಯ್ಕೆಯಾದ ಇಬ್ಬರು ವ್ಯಕ್ತಿಗಳಲ್ಲಿ, ಸಾರ್ವಜನಿಕ ಕುಂದುಕೊರತೆಗಳನ್ನು ನಿವಾರಿಸುವ ಸಲುವಾಗಿ ಸಭೆ ಕರೆಯಲು ಇರಬೇಕಾದ ಕನಿಷ್ಠ ಸಮನ್ವಯ ಇಲ್ಲದಿದ್ದಲ್ಲಿ ಮತ್ತು ಅರ್ಜಿದಾರ–ಉಪಾಧ್ಯಕ್ಷರು ಈ ನ್ಯಾಯಾಲಯದ ಮ್ಯಾಂಡಮಸ್ ಅಧಿಕಾರ ವ್ಯಾಪ್ತಿಯ ನೆರವನ್ನು ಕೋರಿದಲ್ಲಿ ಹೆಚ್ಚಿಗೇನೂ ಹೇಳದೆ, ರಾಜ್ಯದಲ್ಲಿ ಇಂಥ ಸಾರ್ವಜನಿಕ ನಿಕಾಯಗಳು ಹೇಗೆ ಕಾರ್ಯ ನಿರ್ವಹಿಸುತ್ತಿರುತ್ತವೆ ಎಂಬುದನ್ನು ಸೂಚಿಸುತ್ತದೆ.

6. ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸುವ ಮೊದಲು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳಂಥ ಕರ್ನಾಟಕ ಸರ್ಕಾರದ ಉನ್ನತ

ಅಧಿಕಾರಿಗಳ ಗಮನಕ್ಕೆ ಸದರಿ ಕುಂದುಕೊರತೆಯನ್ನು ತಂದಿರುವುದಿಲ್ಲ. ಪ್ರಸ್ತುತ ಪ್ರಕರಣದಲ್ಲಿ ಸಂಬಂಧಪಟ್ಟ ಇಂಜಿನಿಯರ್‌ಗಳು ಮತ್ತು ಕಂದಾಯ ಅಧಿಕಾರಿಗಳ ವರದಿಗಳನ್ನು ತರಿಸಿಕೊಳ್ಳುವ ಮೂಲಕ ನಗರ ಪಾಲಿಕೆಯಲ್ಲಿ ಕಾರ್ಯ ನಿರ್ವಹಿಸುವ ಆಯುಕ್ತರೆ ಸ್ವಲ್ಪಮಟ್ಟಿಗಿನ ಕ್ರಮ ಕೈಗೊಂಡಿದ್ದರೂ ಸಹ, ಅರ್ಜಿದಾರರು ನಗರ ಪಾಲಿಕೆಯ ಉಪಾಧ್ಯಕ್ಷರು ಪ್ರಸ್ತಾಪಿಸಿದಂಥ ಹಲವಾರು ವಿವಾದಗಳನ್ನು ಚರ್ಚಿಸಲು ನಗರ ಪಾಲಿಕೆಯಲ್ಲಿ ಆಯ್ಕೆಯಾದ ವ್ಯಕ್ತಿಗಳ ಯಾವುದೇ ಅಂಥ ಸಭೆಯು ಕರೆದಿರುವುದಿಲ್ಲವೆಂಬುದು ಕಂಡು ಬರುತ್ತದೆ.

7. ಅದೇನೇ ಆಗಿದ್ದರೂ, ಈ ರೀತಿಯಾಗಿ ನಗರ ಪಾಲಿಕೆಯ ಕಾರ್ಯದ ಮೇಲ್ವಿಚಾರಣೆ ಮಾಡಲು ರಿಟ್ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯವನ್ನು ಕೋರುವಂತಿಲ್ಲ. ಅರ್ಜಿದಾರರು, ಪ್ರತ್ಯರ್ಜಿದಾರ ಸಂಖ್ಯೆ 2 ರವರು ಸಾರ್ವಜನಿಕ ಕುಂದುಕೊರತೆಗಳನ್ನು ನಿವಾರಿಸುವ ಸಂಬಂಧದಲ್ಲಿ ಚುನಾಯಿತ ನಗರ ಪಾಲಿಕೆಯ ಸಭೆಗಳನ್ನು ಕರೆಯುತ್ತಿಲ್ಲವೆಂಬುದನ್ನು ಶಿಷ್ಟಾಚಾರದ ಪ್ರಕಾರ ಹಿರಿಯ ಪ್ರಾಧಿಕಾರಿಗಳಿಗೆ ಅರ್ಜಿ ಸಲ್ಲಿಸಬೇಕಾಗಿರುತ್ತದೆ.

8. ಪ್ರಸ್ತುತ ರಿಟ್ ಅರ್ಜಿಯನ್ನು ಊರ್ಜಿತಗೊಳಿಸದೆ ವಜಾ ಮಾಡುವಾಗ, ಈ ನ್ಯಾಯಾಲಯವು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ಮತ್ತು ಅವಶ್ಯಕತೆಯಿದ್ದಲ್ಲಿ ಇತರೆ ಹಿರಿಯ ಪ್ರಾಧಿಕಾರಿಗಳಿಗೆ ಅರ್ಜಿ ಸಲ್ಲಿಸಲು ಅರ್ಜಿದಾರರಿಗೆ ಮುಕ್ತ ಅವಕಾಶವಿದೆಯೆಂದು ಅಭಿಪ್ರಾಯಪಟ್ಟಿರುತ್ತದೆ.

ಈ ಆದೇಶದ ಪ್ರತಿಯನ್ನು, ಮಾಹಿತಿಗಾಗಿ ಮತ್ತು ಈ ವಿಷಯದಲ್ಲಿ ಅವಶ್ಯಕ ಕ್ರಮ ಕೈಗೊಳ್ಳುವುದಕ್ಕಾಗಿ, ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ಇವರಿಗೆ ಕಳುಹಿಸಬೇಕಾಗಿರುತ್ತದೆ.